ಬಾಡಿಗೆಗೆ ಮನೆ ಕೊಡಲು ಒಪ್ಪಿದೆ. ಅವ್ನು ಕೇವಲ ಆರು ತಿಂಗಳಷ್ಟೇ ಇರುವುದಾಗಿ ಹೇಳಿದ್ದ. ಆತ ಆಗಾಗ ಬಂದು ತನ್ಗೆ ಯಾವುದಾದರೂ ಕೊರಿಯರ್ ಬಂದಿದೆಯಾ ಅಂತ ವಿಚಾರಿಸ್ತಿದ್ದ. ನಮ್ಮ ಎಸ್ಟೇಟು ಮುಖ್ಯ ದಾರಿಯಿಂದ ಬಹಳಷ್ಟು ಒಳಭಾಗದಲ್ಲಿದೆ. ಒಂಥರಾ ಗೊಂಡಾರಣ್ಯದೊಳಗೆ ಇದ್ದಂತೆ. ಅಲ್ಲಿಗೆ ಯಾವುದೇ ಕೊರಿಯರ್ ಅಥವಾ ಪೋಸ್ಟ್ ಬರೋಲ್ಲ. ಕುಟ್ಟದಿಂದ ತೋಳ್ಪೆಟ್ಟಿಗೆ ಹೋಗುವ ದಾರಿಯಲ್ಲಿ ಎಡಕ್ಕೆ ಹೋಗಬೇಕು. ಅಲ್ಲಿಂದ ಮುಖ್ಯ ರಸ್ತೆಗೆ ಸುಮಾರು ಮೂರು ಕಿಲೋಮೀಟರ್ ದೂರ. ಮುಖ್ಯ ರಸ್ತೆಯಲ್ಲಿರೋ ಅಂಗಡಿಯಲ್ಲಿ ಕೊರಿಯರ್ ಅಥವಾ ಪೋಸ್ಟ್ ಬಂದಿದ್ದರೆ ಕೊಟ್ಟು ಹೋಗ್ತಾರೆ. ನಾನು ಆ ಕಡೆ ಹೋದಾಗ ಅದ್ನ ತೆಗೆದುಕೊಂಡು ಬರ್ತೀನಿ ಅಷ್ಟೆ. ಆತ ತಪ್ಪಿಯೂ ಮನೆ ಬಿಟ್ಟು ಹೊರಡುತ್ತಿರಲಿಲ್ಲ."

"ನಿಮ್ಮ ಬಾಡಿಗೆದಾರ ನಿಜಕ್ಕೂ ವಿಚಿತ್ರವಾಗಿದಾನೆ. ನಿಮ್ಮ ವಿವರಣೆಯನ್ನು ಮುಂದುವರೆಸಿ."

"ವಾರದ ಹಿಂದೆ ಅವ್ನಿಗೆ ಒಂದು ಕವರು ಬಂದಿತ್ತು. ಆ ಸಂಜೆ ಯಾವತ್ತಿನಂತೆ ಆತ ಬಂದು ವಿಚಾರಿಸಿದಾಗ, ಅದನ್ನು ಆತನಿಗೆ ನೀಡಿದೆ. ಆತ ಆಗ ಬಿಳಿಚಿಕೊಂಡ ಮತ್ತು ಲಗುಬಗೆಯಿಂದ ಮನೆಯೊಳಗೆ ಹೋದ. ಅದೇ ಅವನನ್ನ ನಾನು ಕಡೆಯ ಬಾರಿ ನೋಡಿದ್ದು. ಆಮೇಲೆ ಆತ ಮನೆಯೊಳಗೆ ಕಾಣಲೇ ಇಲ್ಲ! ಎಲ್ಲಿ ಮಾಯವಾದ? ಮಾರನೇ ದಿನವೇ ಆತನಿಗೆ ಇನ್ನೊಂದು ಲಕೋಟೆ ಬಂದಿತ್ತು. ಅದನ್ನ ಕೊಡೋಣವೆಂದರೆ ಆತ ಮನೆಯಲ್ಲೇ ಇರಲಿಲ್ಲ. ಹಾಗಾಗಿ ಅದನ್ನು ಬಾಗಿಲ ಸಂದಿಯ ಮೂಲಕ ಒಳತೂರಿಸಿದೆ..."

"ನೀವು ಆತನ ಮೊಬೈಲಿಗೆ ಕರೆ ಮಾಡಿ ನೋಡಬಹುದಿತ್ತಲ್ಲ?" ನಾನು ವಿಚಾರಿಸಿದೆ.

"ಆತನ ಬಳಿ ಮೊಬೈಲೇ ಇಲ್ಲ! ಹೀಗೆ ಪದೇ ಪದೇ ಬರುವ ಲಕೋಟೆಗಳಲ್ಲಿ ಏನಿವೆ? ಆತ ಯಾವಾಗಲೂ ಮನೆಯ ಕಿಟಕಿ, ಬಾಗಿಲುಗಳನ್ನು ಭದ್ರವಾಗಿ ಮುಚ್ಚಿರುತ್ತಾನೆ. ಒಂದು ಕಿಟಕಿಯ ಬಾಗಿಲು ಸರಿಯಿರಲಿಲ್ಲ. ಜೋರಾಗಿ ಅದುಮಿದರೆ ಅದರ ಅಗುಳಿ ಚಿಮ್ಮುತ್ತದೆ. ನಾನು ಅದನ್ನು ಮೆಲ್ಲಗೆ ತೆರೆದು ನೋಡಿದೆ. ಒಂದು ಲಕೋಟೆ ಮೇಜಿನ ಮೇಲೆ, ಇನ್ನೊಂದು ಬಾಗಿಲ ಬುಡದಲ್ಲೇ ಇತ್ತು. ಎರಡನ್ನೂ ಒಡೆದಿರಲಿಲ್ಲ! ನಿನ್ನೆ ಆತನಿಗೆ ಇನ್ನೊಂದು ಲಕೋಟೆ ಬಂತು!! ನನಗೀಗ ಸಮಸ್ಯೆ ಜಟಿಲವಾಗುತ್ತಿದೆ ಅಂತ ಅನ್ನಿಸಿತು. ನೋಡಿ, ಇದೇ ಆತನಿಗೆ ನಿನ್ನೆ ಬಂದ ಲಕೋಟೆ."

ಹಾಗೆಂದು ಜೇಬಿನಿಂದ ಆತ ಲಕೋಟೆಯೊಂದನ್ನು ತೆಗೆದು ತೋರಿಸಿದ.

"ಒಂದು ವಿಚಾರ ತಿಳಿಬೇಕಿತ್ತು. ಆ ಲಕೋಟೆಗಳನ್ನು ತಂದಿದ್ದು ನೀವೇಯೋ?"

"ಅಲ್ಲ. ನಮ್ಮ ಆಳು ಮುತ್ತಪ್ಪ. ಏನಾದ್ರೂ ತರಲು ಮುಖ್ಯ ರಸ್ತೆಗೆ ಹೋಗ್ತಾನೆ. ಅವ್ನೇ ತಂದಿದ್ದು."

ಕರಮಚಂದ ಬಹಳ ಆಸಕ್ತಿಯಿಂದ ಅದನ್ನು ಮೇಲೆ ಕೆಳಗೆ ತಿರುಗಿಸಿ, ಗಮನಿಸಿದ. ಗುಲಾಬಿ ಬಣ್ಣದ ಮಾಮೂಲು ಲಕೋಟೆ. ಪಾದಯ್ಯ ಅನ್ನುವವನು ಕಳಿಸಿದ್ದು. ಸಕಲೇಶಪುರ ಸಮೀಪದ ಬಾಳುಪೇಟೆಯ ವಿಳಾಸವಿತ್ತು. ಲಕೋಟೆ ಹೆಚ್ಚು ದಪ್ಪವಾಗಿರಲಿಲ್ಲ. ಅದರೊಳಗೆ ತೆಳ್ಳಗಿನ ಕಾಗದವೊಂದಷ್ಟೇ ಇದ್ದಿರಲು ಸಾಧ್ಯ.

"ನೋಡಿ, ಸಂಪಂಗಿಯ ವಿಳಾಸ. ಬೇರೆ ಕಾಗದದಲ್ಲಿ ಬರೆದು ಅಂಟಿಸಿದ್ದಾರೆ. ಹೆಸರು ಮಾತ್ರ ಲಕೋಟೆಯ ಮೇಲೇ ಇದೆ. ವಿಳಾಸವನ್ನೂ ಲಕೋಟೆಯ ಮೇಲೇ ಬರೆಯಬಹುದಿತ್ತಲ್ಲ! ಯಾಕೆ ಬರೆದಿಲ್ಲ? ಹಾಂ, ಹಸ್ತಾಕ್ಷರವೂ ಬದಲಾಗಿದೆ. ಅಂದರೆ ಹೆಸರು ಮತ್ತು ವಿಳಾಸ ಬರೆದ ವ್ಯಕ್ತಿಗಳು ಬೇರೆ ಬೇರೆ! ಕುತೂಹಲಕಾರಿಯಾಗಿದೆ."

ಕರಮಚಂದ ಬೆಳಕಿಗೆ ಲಕೋಟೆಯನ್ನು ಹಿಡಿದು ನೋಡಿದ. ಒಳಗಡೆ ಮಡಚಿಟ್ಟ